**ಅಸಲು ದಾವೆ ಸಂಖ್ಯೆಃ 289 /2017** **ಡಿ.ಡಬ್ಲ್ಯು ಃ 1**

**<u>ದಿನಾಂಕಃ20.01.2026 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ವಿ.ಎ., ವಕೀಲರಿಂದಃ</u>**

ಸರ್ವೇ ನಂಬರ್ 13/1 ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರ ವಿಸ್ತೀರ್ಣ 1 ಎಕರೆ 15 ಗುಂಟೆ ಎಂದರೆ ಸರಿಯಲ್ಲ, ಕೇಲವ 1 ಎಕರೆ ಇರುತ್ತದೆ. ಅದರಲ್ಲಿ 27½ ಗುಂಟೆ ವಾದಿಗೆ ಸೇರಿದ್ದು ಎಂದರೆ ಸರಿ. ಸರ್ವೇ ನಂಬರ್ 13/1 ರಲ್ಲಿ ನೇರಳೆ ಮರಗಳು ಇವೆ ಎಂದರೆ ಸರಿಯಲ್ಲ ಸರ್ವೇ ನಂಬರ್ 14 ರಲ್ಲಿ ಇದೆ. 27½ ಗುಂಟೆ ಜಮೀನಿನ ಪೂರ್ವಕ್ಕೆ ಕೆ ವಿ ಸುಬ್ಬಾರೆಡ್ಡಿ ರವರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ಸೂರ್ವಪ್ರಕಾಶ್ ಅವರ ಆಸ್ತಿ ಜಯಶ್ರಿ ರವರ ಜಮೀನು ಇದೆ ಎಂದರೆ ಸರಿಯಲ್ಲ, ಅದರ ಪಶ್ಚಿಮಕ್ಕೆ ಸರ್ವೇ ನಂಬರ್ 14 ಇದೆ. ಸರ್ವೇ ನಂಬರ್ 14 ರಲ್ಲಿ ನಾನೇ ಸ್ವಾಧೀನದಲ್ಲಿದ್ದ ಕಾರಣ ಹೇಳುತ್ತಿದ್ದೇನೆ. ಸರ್ವೇ ನಂಬರ್ 13/1 ರ ಪಶ್ಚಿವಕ್ಕೆ ನಾನು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಉತ್ತರಕ್ಕೆ ರಸ್ತೆ ಮತ್ತು ಸರ್ಕಾರಿ ಓಣಿ ಇದೆ ಎಂದರೆ ಸರಿಯಲ್ಲ ನನ್ನ ಜಮೀನು ಬರುತ್ತದೆ. ಉತ್ತರದ ಕಡೆ ನನ್ನ ಜಮೀನಿನ ಸರ್ವೇ ನಂಬರ್ 1 ಇದೆ. ನನ್ನ ಪ್ರಕಾರ ನನ್ನ ಆಸ್ತಿ ಸರ್ವೇ ನಂಬರ್1 ರ ದಕ್ಷಿಣಕ್ಕೆ ವಾದಿಯ ಆಸ್ತಿ ಇದೆ. ಉತ್ತರಕ್ಕೆ ರಸ್ತೆ ಮತ್ತು ಸರ್ಕಾರಿ ಗುಟ್ಟೆ ಇದ್ದರು ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸರ್ವೇ ನಂಬರ್ 43 ಮತ್ತು 44 ಇದೆ ಎಂದರೆ ಸರಿ.

ಸರ್ವೇ ನಂಬರ್ 14 ರ ಮಾಹಿತಿ ಇದೆ. ಅದರ ಒಟ್ಟು ವಿಸ್ತೀರ್ಣ 34 ಗುಂಟೆ ಇದೆ ಎಂದರೆ ಸರಿಯಲ್ಲ 1 ಎಕರೆ ಇದೆ. ಸರ್ವೇ ನಂಬರ್ 14 ರಲ್ಲಿ 34 ಗುಂಟೆಗಳ ಪೈಕಿ 17 ಗುಂಟೆ ವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ 17 ಗುಂಟೆಗೆ ಚಕ್ಕುಬಂದಿ ಪೂರ್ವಕ್ಕೆ ಕೆ ವಿ ಸುಬ್ಬಾರೆಡ್ಡಿ ರವರ ಆಸ್ತಿ ಎಂದರೆ ಸರಿ, ಪಶ್ಚಿಮಕ್ಕೆ ಸೂರ್ಯಪ್ರಕಾಶ್ ಅವರ ಪತ್ನಿ ಜಯಶ್ರೀ ರವರ ಆಸ್ತಿ ಎಂದರೆ ಸರಿಯಲ್ಲ. ಉತ್ತರಕ್ಕೆ ಸರ್ವೇ ನಂಬರ್ 79 ಮತ್ತು 81 ಬರುತ್ತದೆ ಎಂದರೆ ಸರಿಯಲ್ಲ ಸರ್ವೇ ನಂಬರ್ 1 ಬರುತ್ತದೆ. ಆ ರೀತಿ ಸರ್ವೇ ನಂಬರ್ 1

ಬರುತ್ತದೆ ಎಂದು  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದಕ್ಷಿಣಕ್ಕೆ ರಸ್ತೆ ಮತ್ತು ಚಿಕ್ಕಸೊಣ್ಣಪ್ಪ ರವರ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 19 ರ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲ.  ಈ ಆಸ್ತಿಯಲ್ಲಿ ಉತ್ತರ ದಕ್ಷಿಣದ ದಿಕ್ಕಿಗೆ ಒಂದು ರಸ್ತೆ ಇದೆ ಎಂದರೆ ಸರಿಯಲ್ಲ ಕಾಲುದಾರಿ ಇದೆ.  ಸದರಿ ರಸ್ತೆಯ ಪೂರ್ವಕ್ಕೆ ಸರ್ವೇ ನಂಬರ್ 43, 13 ಮತ್ತು 12 ಇದೆ ಎಂದರೆ ಸರಿಯಲ್ಲ ಸುಬ್ಬಾರೆಡ್ಡಿ ಅವರ ಆಸ್ತಿ ಬರುತ್ತದೆ.  ಸುಬ್ಬಾರೆಡ್ಡಿ ರವರ ಆಸ್ತಿ ಇದೆ ಎಂದು ಹೇಳಲು ದಾಖಲೆಗಳನ್ನು ನೋಡಿಲ್ಲ.  ಪಶ್ಚಿಮಕ್ಕೆ ಸರ್ವೇ ನಂಬರ್ 15, 16 ಮತ್ತು 14  ಇದೆ ಎಂದರೆ ಸರ್ಕಾರಿ ಜಮೀನು ಇದೆ ನಂಬರ್ ಗೊತ್ತಿಲ್ಲ.  ಉತ್ತರಕ್ಕೆ ಸರ್ವೇ ನಂಬರ್  19 ಇದೆ ಎಂದರೆ ಸರಿಯಲ್ಲ ಸರ್ವೇ ನಂಬರ್ 1 ಇದೆ.  ದಕ್ಷಿಣಕ್ಕೆ ಸರ್ವೇ ನಂಬರ್ 19 ರ ಉಳಿದ  ವಿಸ್ತೀರ್ಣ ಇದೆ ಎಂದರೆ ಸರಿ.

ಈ ಮೇಲೆ ಹೇಳಿದ್ದ 27½ ಗುಂಟೆ ಮತ್ತು 17 ಗುಂಟೆ  ವಿಸ್ತೀರ್ಣ ಆಸ್ತಿಯು ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಮೊದಲು ಈ ಆಸ್ತಿಗಳು ಚಿಕ್ಕಕೊಂಡಮರಿ ಗ್ರಾಮಕ್ಕೆ ಸೇರಿದ್ದ ಆಸ್ತಿ ಎಂದರೆ ಸರಿ.  ದಿಃ15.11.2001 ರಲ್ಲಿ ವಾದಿಯ ಕುಟುಂಬದಲ್ಲಿ ಸದರಿ ಆಸ್ತಿಗಳು ವಿಭಾಗವಾಗಿದ್ದು ಆ ವಿಭಾಗದ ಪ್ರಕಾರ ಈ ಆಸ್ತಿಗಳು ವಾದಿಗೆ ಬಂದಿತ್ತು ಎಂದರೆ ಸರಿಯಲ್ಲ. ಆ ವಿಭಾಗದ ಪ್ರಕಾರ ಎಫ್ ಷೆಡ್ಯೂಲ್ ಆಸ್ತಿಗಳು ವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಎರಡೂ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಯೇ ಸದರಿ ಆಸ್ತಿಗಳ ಸ್ವಾಧೀನದಲ್ಲಿದ್ದು ಅವರ ಹೆಸರಿಗೆ ಖಾತೆ ನೊಂದಾಯಿಸಲಾಗಿದೆ ಎಂದರೆ ಸರಿಯಲ್ಲ. ವಾದಿಗೆ ಸರ್ವೇ ನಂಬರ್ 13 ರಲ್ಲಿ ಯಾವ ಆಧಾರದ ಮೇಲೆ ಆಸ್ತಿ ಬಂದಿದೆ ಎಂದು ನನಗೆ ಗೊತ್ತಿಲ್ಲ.

ಸರ್ವೇ ನಂಬರ್ 14 ಮೊದಲು ಕಾಗತ್ತಿ ಚೌಡಪ್ಪ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಕಾಗತ್ತಿ ಚೌಡಪ್ಪ ರವರ ಮಕ್ಕಳು ವಾದಿಯ ತಂದೆಗೆ ದಿಃ14.08.1961  ರಂದು

ನೋಂದಾಯಿತ  ಕ್ರಯಪತ್ರದ ಮೂಲಕ  ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ.  ಕಾಗತ್ತಿ ಚೌಡಪ್ಪ ರವರ ಮಕ್ಕಳು ಆ ಸಮಯದಲ್ಲೇ ವಾದಿಯ ತಂದೆಗೆ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ಆಸ್ತಿಯೂ ಸಹಾ ವಾದಿಯ  ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಸ್ವಾಧೀನದಲ್ಲಿ ವಾದಿಯೇ ಇದ್ದು ಆದರೆ ಖಾತಾ ಬದಲಾವಣೆಯಾಗದೇ ಇದ್ದ ಕಾರಣ ಪಹಣಿಯು ಕಾಗತ್ತಿ ಚೌಡಪ್ಪ  ರವರ ಮಕ್ಕಳ ಹೆಸರಿನಲ್ಲೆ ಬರುತ್ತಿದೆ ಎಂದರೆ ಸರಿಯಲ್ಲ.  ವಾದಿಯು ಎರಡೂ ಆಸ್ತಿಗಳಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 13/1 ರಲ್ಲಿ  3  ಗುಂಟೆ ಕರಾಬು ಜಮೀನು ಇದ್ದು ಅದರಲ್ಲಿಯೇ ವಾದಿಯು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ್ದ ವಿಭಾಗ ಪತ್ರದ ಇ ಷೆಡ್ಯೂಲ್ ಆಸ್ತಿಯು ವಾದಿಯ ತಮ್ಮನಾದ ಸೂರ್ಯಪ್ರಕಾಶ್ ರವರಿಗೆ ಬಂದಿತ್ತು ಎಂದರೆ ಸರಿಯಲ್ಲ.   ಈ ಎರಡೂ ಆಸಿತಗಳ ಉತ್ತರಕ್ಕೆ ಇರುವ ರಸ್ತೆ ಸರ್ವೇ ನಂಬರ್ 19 ರಲ್ಲಿಇದ್ದು, ಆ ರಸ್ತೆ ಏಕೈಕ ರಸ್ತೆ ಎಂದರೆ ಸರಿಯಲ್ಲ. ಅಕ್ಕಪಕ್ಕದ ಜಮೀನನವರು ಸಹಾ ಅದೇ ರಸ್ತೆಯನ್ನು ಬಳಸಿ ತಮ್ಮ ಜಮೀನಿಗೆ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 14 ರಲ್ಲಿ ನಾನು ಸ್ವಾಧೀನದಲ್ಲಿರುವ ಬಗ್ಗೆ ದಾಖಲೆ ನೀಡಿಲ್ಲ.  ನಾನು ಮತ್ತು 1 ನೇ ಪ್ರತಿವಾದಿ ಸರ್ವೇ ನಂಬರ್ 13 ಅಥವಾ 14 ರಲ್ಲಿ ಅಥವಾ ಅಕ್ಕ ಪಕ್ಕದಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ 2017 ರಲ್ಲಿ ಸರ್ವೇ ನಂಬರ್ 19 ರಲ್ಲಿರುವ ರಸ್ತೆಯನ್ನು ಒತ್ತುವರಿ ಮಾಡಲು ಪ್ರಯತ್ನಪಟ್ಟಿದ್ದೇವು ಎಂದರೆ ಸರಿಯಲ್ಲ. ಈ  ರೀತಿ ತೊಂದರೆ ಮಾಡಿದ್ದಕ್ಕೆ ವಾದಿ ನಮ್ಮ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ವಾದಿಯು ಎಸಿ ಮತ್ತು ತಹಶೀಲ್ದಾರವರಿಗೂ  ಪತ್ರ ಬರೆದಿದ್ದು , ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಸರ್ಕಾರಿ ಅಧಿಕಾರಿಗಳು ಸ್ಥಳಕ್ಕೆ ಮಹಜರು ಮಾಡಿ ರಸ್ತೆ ಇರುವ ಬಗ್ಗೆ ದೃಢೀಕರಣ ಮಾಡಿದ್ದರು ಎಂದರೆ ಸರಿಯಲ್ಲ.

ಸರ್ವೇ ನಂಬರ್ 13 ಮತ್ತು 14 ರ ಅಕ್ಕಪಕ್ಕದಲ್ಲಿ ಯಾವುದೇ ಗೋಮಾಳ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

ದಿಃ 04.10.2020 ರಲ್ಲಿ ವಾದಿಯು ತನ್ನ ಆಸ್ತಿಯಲ್ಲಿ ಉತ್ತರದ ಕಡೆಗೆ ಕೃಷಿ ಹೋಂಡಾ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಅಕ್ಕ ಪಕ್ಕದ ಜಮೀನಿನವರು ಸಹಾ ಆ ಕೃಷಿ ಹೋಂಡಾದ ನೀರನ್ನು ಬಳಸುತ್ತಾರೆ ಎಂದರೆ ಸರಿಯಲ್ಲ.

ನಾನು ಗ್ರಾಮದಲ್ಲಿ ರಾಜಕೀಯವಾಗಿ ಸಕ್ರಿಯವಿದ್ದೆ ಎಂದರೆ ಸರಿಯಲ್ಲ. ನನ್ನ ರಾಜಕೀಯ ಪ್ರಭಾವವನ್ನು ಬೀರಿ ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಚೌಡಪ್ಪ ರವರ ಮಕ್ಕಳು ಬರೆದು ನೀಡಿರುವ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ.

ಸರ್ವೇ ನಂಬರ್ 14 ರ ಪಹಣಿಯನ್ನು ನೋಡಿದ್ದೇನೆ ಅದು ಗೋಮಾಳ ಜಮೀನು. ಸರ್ವೇ ನಂಬರ್ 14 ರಲ್ಲಿ ನಿಪಿ.5 ರಂತೆ ಕಾಗತ್ತಿ ಚೌಡಪ್ಪ ಮತ್ತು ಸೂರ್ಯ ಪ್ರಕಾಶ್ ರವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 19 ಸಂಪೂರ್ಣ ಆಸ್ತಿ ಕರಾಬು ಜಮೀನು ಎಂದರೆ ಸರಿ. ನಾನು ಹೇಳುವಂತೆ ಸರ್ವೇ ನಂಬರ್ 1 ರಲ್ಲಿ ನಾನು ಸ್ವಾಧೀನದಲ್ಲಿಲ್ಲ ಅಲ್ಲಿ ಯಾವುದೇ ಗೋಮಾಳ ಇಲ್ಲ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ಹೇಳಿರುವಂತೆ ಸರ್ವೇ ನಂಬರ್ 1 ರಲ್ಲಿ 3 ಎಕರೆ ವಿಸ್ತೀರ್ಣ ರಲ್ಲಿ ಹೇಳಿರುವ ಪ್ರಕಾರ ಯಾವುದೇ ಚಕ್ಕು ಬಂದಿಯ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು 30 ವರ್ಷಗಳ ಹಿಂದೆ ದರಕಾಸ್ಥಿತಿಕಾಗಿ ಅರ್ಜಿ ಸಲ್ಲಿಸಿದ್ದೆ. ನನಗೆ ಇನ್ನೂ ಯಾವುದೆ ಆಸ್ತಿ ಮಂಜೂರು ಆಗಿಲ್ಲ ಎಂದರೆ ಸರಿ. ನಾನು ಆಸ್ತಿಯಲ್ಲಿ ಸ್ವಾಧೀನದಲಿಲ್ಲದೇ ಇರುವ ಕಾರಣ ನನಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ದಾಖಲೆಯು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ ನಿಡಿ.2 ರಲ್ಲಿ ದಿನಾಂಕ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಿಡಿ.3 ರಿಂದ 10 ಪೋಟೋಗಳು ವಾದಿಯ ಆಸ್ತಿಯ ದಾಖಲೆಗಳು ಎಂದರೆ ಸರಿಯಲ್ಲ. ವಾದಿಯ

ಅನುಪಸ್ಥಿತಿಯಲ್ಲಿ ನಾನು ವಾದಿಯ ಆಸ್ತಿಯಲ್ಲಿ ಫೋಟೊ ತೆಗೆಸಿದ್ದೇನೆ ಎಂದರೆ ಸರಿಯಲ್ಲ. ವಾದಿಯೇ ಸ್ವಾಧೀನದಲ್ಲಿದ್ದರೂ ಸಹಾ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.